ವಿಶೇಷ ತಹಶೀಲ್ದಾರರ ಹುದ್ದೆಯನ್ನು ತುಂಬುವುದು

ಚುಕ್ಕೆ ಗುರುತಿನ ಪ್ರಶ್ನೆ ಕ್ರಮ ಸಂ : ೩೩೬ (೨೨೬೮)

ಸದಸ್ಯರ ಹೆಸರು : ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳ್ಳೇದಗುಡ್ಡ)

ಉತ್ತರಿಸುವವರು : ಶ್ರೀ ಜಗದೀಶ ಶೆಟ್ಟರ್

ಪ್ರಶ್ನೆ

ಅ) ಕಳೆದ ಎರಡು ವರ್ಷಗಳಿಂದ ಗುಳೇದಗುಡ್ಡದಲ್ಲಿ ವಿಶೇಷ ತಹಶೀಲ್ದಾರರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಇಲ್ಲಿಯವರೆಗೆ ಅಧಿಕಾರಿಗಳನ್ನು ನೇಮಕ ಮಾಡದಿರಲು ಕಾರಣಗಳೇನು?

ಉತ್ತರ

ಅ) ಬಂದಿದೆ.

ಆ) ಗುಳೇದಗುಡ್ಡದಲ್ಲಿನ ವಿಶೇಷ ತಹಶೀಲ್ದಾರ್ ಹುದ್ದೆಯು ದಿನಾಂಕ ೧-೯-೨೦೦೫ ರಿಂದ ಖಾಲಿ ಇರುತ್ತದೆ. ಪ್ರಸ್ತುತ ಬಾದಾಮಿ ತಾಲ್ಲೂಕು ತಹಶೀಲ್ದಾರ್, ಗುಳೇದ ಗುಡ್ಡ ವಿಶೇಷ ತಹಶೀಲ್ದಾರ್ ಹುದ್ದೆಯ ಅಧಿಕ ಪ್ರಭಾರದಲ್ಲಿರುತ್ತಾರೆ. ೨೦೦೬ ರಿಂದ ಮೂರು ತಂಡಗಳಲ್ಲಿ ಕೆ.ಪಿ.ಎಸ್.ಸಿ. ಯಿಂದ ಆಯ್ಕೆಗೊಂಡ ತಹಶೀಲ್ದಾರರುಗಳು ಬಂದಿದ್ದು, ಸದರಿ ತಹಶೀಲ್ದಾರರುಗಳು ಪ್ರಸ್ತುತ ಪರಿವೀಕ್ಷಣಾ ತರಬೇತಿಯಲ್ಲಿರುತ್ತಾರೆ. ತರಬೇತಿ ಅವಧಿ ಮುಗಿದ ಕೂಡಲೇ ಗುಳೇದಗುಡ್ಡ ವಿಶೇಷ ತಹಶೀಲ್ದಾರ್ ಹುದ್ದೆ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್. ವೈ. ಮೇಟಿ : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಗುಳೇದಗುಡ್ಡದ ತಹಶೀಲ್ದಾರ್ ಹುದ್ದೆಯು ಸುಮಾರು ೨ ವರ್ಷಗಳಿಂದಲೂ ಖಾಲಿ ಇದೆ. ಇವತ್ತಿನವರೆಗೂ ಅಲ್ಲಿ ತಹಶೀಲ್ದಾರ್ ರವರನ್ನು ನೇಮಿಸಿರುವುದಿಲ್ಲ. ತರಬೇತಿಯನ್ನು

ಪಡೆದು ಬಂದ ನಂತರ ನೇಮಕಾತಿಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಗುಳೇದಗುಡ್ಡವು ೩೫ ಸಾವಿರ ಜನಸಂಖ್ಯೆ, ಆ ಕ್ಷೇತ್ರದಲ್ಲಿರುವಂತಹ ಹಳ್ಳಿಗಳನ್ನು ಲೆಕ್ಕಹಾಕಿದರೆ, ಅಲ್ಲಿ ೯೦% ಬಡವರು, ನೇಕಾರರು ಇದ್ದಾರೆ. ಪ್ರತಿಯೊಂದಕ್ಕೂ ಅವರು ಬಾದಾಮಿಗೆ ಹೋಗಬೇಕೆಂದರೆ, ಎಷ್ಟು ತೊಂದರೆಯಾಗುತ್ತದೆ. ಒಂದು ಅಥವಾ ಎರಡು ತಿಂಗಳಾದರೆ ಏನಾದರೂ ಮಾಡಬಹುದು, ಅಲ್ಲಿ ೨ ವರ್ಷಗಳಿಂದ ತಹಶೀಲ್ದಾರ್ ಇಲ್ಲವೆಂದರೆ ಹೇಗೆ ? ಅವರನ್ನು ತರಬೇತಿ ಮುಗಿಸಿಕೊಂಡು ಬಂದ ನಂತರ ಹಾಕುತ್ತೇವೆಂದರೆ, ಏತಕ್ಕಾಗಿ ಈ ರೀತಿಯಾಗಿ ಮಾಡುತ್ತಾರೆ ? ಗುಳೇದಗುಡ್ಡ ಎಂದರೆ ಪ್ರತಿಯೊಂದು ಅಧಿಕಾರಿಗಳು ನಿರ್ಲಕ್ಷ್ಯವನ್ನು ತೋರಿಸುತ್ತಾರೆ. ಆ ಊರಿನಲ್ಲಿ ನೀರಿಲ್ಲವೆಂದು ತಹಶೀಲ್ದಾರ್ ಗೆ ಫೋನ್ ಮಾಡಿ ಹೇಳಿದರೆ ಅವರು ಬಂದು ನೋಡುವುದಕ್ಕೂ ಕೂಡ ತಯಾರಿರುವುದಿಲ್ಲ. ಅವರು ಬಂದು ನೋಡಿದ ಮೇಲಾದರೂ ಕೂಡ ಟ್ಯಾಂಕರ್ ಮೂಲಕ ನೀರು ಕಳುಹಿಸುವುದಿಲ್ಲ. ಈ ರೀತಿಯಾದರೆ ನಾವು ಯಾವ ರೀತಿಯಾಗಿ ಸಹಕರಿಸಬೇಕು. ಮಾನ್ಯ ಕಂದಾಯ ಸಚಿವರಿಗೆ ನಮ್ಮ ಮತಕ್ಷೇತ್ರದ ಹಣೇಬರಹ ಪೂರ್ತಿ ಗೊತ್ತಿದೆ. ಅವರು ಆ ಕ್ಷೇತ್ರದ ಅಳಿಯಂದಿರಾಗಿದ್ದಾರೆ. ಅವರ ಪತ್ನಿಯವರು ಐಹೊಳೆ ಪಟ್ಟಣದವರಾಗಿದ್ದಾರೆ. ಅವರಿಗೆ ಗೊತ್ತಿದ್ದು ಈ ರೀತಿಯಾಗಿ ಮಾಡಿದರೆ ಹೇಗೆ ? ಈ ಮಧ್ಯೆ ಯಾರಾದರೂ ಒಬ್ಬರನ್ನು ತಂದು ಹಾಕುವುದಕ್ಕಾಗುವುದಿಲ್ಲವೇ ಏಕೆ ಹಾಕಬಾರದು ?

ಶ್ರೀ ಜಗದೀಶ್ ಶೆಟ್ಟರ್ : ಗುಳೇದಗುಡ್ಡದಲ್ಲಿ ವಿಶೇಷ ತಹಶೀಲ್ದಾರ್ ಹುದ್ದೆ ಖಾಲಿ ಇರುವುದು ನಿಜವೆಂದು ನಾವು ಒಪ್ಪಿಕೊಂಡಿದ್ದೇವೆ. ೧೯೮೬ ರಿಂದ ಕೆಪಿಎಸ್‌ಸಿಯಿಂದ ಗ್ರೇಡ್ – ೨ ತಹಶೀಲ್ದಾರ್ ರವರನ್ನು ನೇರ ನೇಮಕಾತಿ ಮಾಡಲಿಲ್ಲ. ಕೊನೆಗೆ ೨೦೦೬ರಲ್ಲಿ ೧೯೯೦ ನೇ ತಂಡದಲ್ಲಿ ೮೦ ಜನರನ್ನು, ೧೯೯೮ ರ ತಂಡದಲ್ಲಿ ೫೦ ಜನರನ್ನು, ೨೦೦೫ರ ತಂಡದಲ್ಲಿ ೪೦ ತಹಶೀಲ್ದಾರ್ ರವರನ್ನು ಈಗಾಗಲೇ ಕೆಪಿಎಸ್ ಸಿಯಿಂದ ನೇಮಕವಾಗಿದೆ. ಒಟ್ಟು ೧೫೬ ತಹಶೀಲ್ದಾರ್ ಗಳು ಈಗ ಟ್ರೈನಿಂಗ್ ಗೆ ಹೋಗಿದ್ದಾರೆ. ಏಪ್ರಿಲ್ ತಿಂಗಳಲ್ಲಿ ೧೫೬ ತಹಶೀಲ್ದಾರ್ ರವರನ್ನು ನಾವು ನೇಮಕ ಮಾಡಿ ಪೋಸ್ಟಿಂಗ್ ನ್ನು ಕೊಡುತ್ತೇವೆ. ಅದರಲ್ಲಿ ಮೊದಲನೇ ಪ್ರಾಶಸ್ತ್ಯವಾಗಿ ಗುಳೇದಗುಡ್ಡಕ್ಕೆ ಅವರನ್ನು ಏಪ್ರಿಲ್ ತಿಂಗಳ ಅಂತ್ಯದೊಳಗಾಗಿ ಈ ಹುದ್ದೇಯನ್ನು ತುಂಬಿಕೊಡುತ್ತೇವೆ.